
# ನಿಮ್ಮೊಡನೆ

# ಶಿಶು ಆಹಾರದಲ್ಲಿ ಅಧಿಕ ಸಕ್ಕರೆ ಅಂಶ ಹಲವು ಪ್ರಶ್ನೆಗಳಿಗೆ ಉತ್ತರ ಸಿಗುವುದೆ?

**ಶಿಶು ಆಹಾರ ತಯಾರಿಕೆಯಲ್ಲಿನ ತಾರತಮ್ಯ ಅಕ್ಷಮ್ಯ. ಏಷ್ಯಾ ದೇಶಗಳಲ್ಲಿ ಮಾರಾಟ ಮಾಡುವ ಉತ್ಪನ್ನಗಳಲ್ಲಿ ಸಕ್ಕರೆ ಅಂಶ ಹೆಚ್ಚಿಗಿರುವುದು ಹಾಗೂ ಯೂರೋಪ್‌ನಲ್ಲಿ ಸಕ್ಕರೆಮುಕ್ತ ಉತ್ಪನ್ನಗಳನ್ನು ಮಾರಾಟ ಮಾಡುವುದು – ದ್ವಂದ್ವ ವ್ಯಾಪಾರಿ ನೀತಿಯ ಹಿಂದಿನ ಹುನ್ನಾರ ಕಲ್ಪನಾತೀತ.**




ಜೀವಪೋಷಕ ಆಹಾರ ಉತ್ಪನ್ನಗಳೇ ಆತಂಕಕ್ಕೆ ಕಾರಣವಾಗಿರುವಂತಹ ವಿಪರ್ಯಾಸದ ಸನ್ನಿವೇಶ ನಮ್ಮ ಎದುರಿಗಿದೆ! ಹಣ್ಣುಹಂಪಲು, ಹಾಲಿನ ಉತ್ಪನ್ನಗಳು, ಮಸಾಲೆ ಪದಾರ್ಥಗಳು ಒಳಗೊಂಡು ದಿನನಿತ್ಯ ಬಳಸುವ ತರಕಾರಿಯವರೆಗೂ ಅನುಮಾನದ ಹುತ್ತ ಬೆಳೆದುನಿಂತಿದೆ. ರಸಗೊಬ್ಬರ, ಕೀಟನಾಶಕಗಳ ಅತಿಯಾದ ಬಳಕೆಯಿಂದಾಗುವ ದುಷ್ಪರಿಣಾಮಗಳು ಒಂದೆಡೆಯಾದರೆ, ಬೆಳೆಗೆ ಬಳಸುವ ನೀರಿನ ಮೂಲ ಕೂಡ ಇತ್ತೀಚಿನ ವರ್ಷಗಳಲ್ಲಿ ಕಳವಳಕ್ಕೆ ಕಾರಣವಾಗಿದೆ. ಮಾವು, ಬಾಳೆಯಂತಹ ಹಣ್ಣುಗಳನ್ನು ಅಸಹಜವಾಗಿ ಮಾಗಿಸಲು ರಾಸಾಯನಿಕಗಳ ಬಳಕೆ, ಸೇಬು ಹೆಚ್ಚು ದಿನ ಕೆಡದೇ ಇರುವಂತೆ ಮಾಡಲು ಮೇಣದ ಲೇಪನ... ಇವೆಲ್ಲವೂ ಬಳಕೆದಾರರ ನೆಮ್ಮದಿ ಕದಡಿರುವಂತಹ ಅಂಶಗಳೇ ಆಗಿವೆ.

ಈ ಯಾದಿಗೆ ಈಗ ಶಿಶು ಆಹಾರ ಕೂಡ ಸೇರಿದೆ. ‘ಸೆರೆಲಾಕ್’ನಲ್ಲಿ ಸಕ್ಕರೆ ಅಂಶ ಅಧಿಕವಾಗಿದೆ ಎನ್ನಲಾದ ಸುದ್ದಿ ಪೋಷಕರಲ್ಲಿ ಆಕ್ರೋಶ ಉಕ್ಕಿಸಿದೆ. ಬಹುರಾಷ್ಟ್ರೀಯ ಕಂಪನಿ ನೆಸ್ಲೆ ಇಂಡಿಯಾವು ಭಾರತ ಸೇರಿ ಹಲವು ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಾರಾಟ ಮಾಡುತ್ತಿರುವ ತನ್ನ ಶಿಶು ಆಹಾರ ಉತ್ಪನ್ನಗಳಲ್ಲಿ ಸಕ್ಕರೆ ಅಂಶವನ್ನು ಹೆಚ್ಚುವರಿಯಾಗಿ ಸೇರಿಸಿದೆ ಮತ್ತು ಅದು ಅಧಿಕ ಪ್ರಮಾಣದಲ್ಲಿ ಇದೆ ಎಂಬ ಅಂಶ ಅಧ್ಯಯನಗಳಿಂದ ಗೊತ್ತಾಗಿದೆ ಎಂದು ವರದಿಯಾಗಿದೆ. ಕಂಪನಿಯು ವಿವಿಧ ದೇಶಗಳಲ್ಲಿ ಮಾರಾಟ ಮಾಡುವ 150 ಬಗೆಯ ಶಿಶು ಉತ್ಪನ್ನಗಳ ಬಗ್ಗೆ ಸ್ವಿಸ್ ಮೂಲದ ಸ್ವಯಂಸೇವಾ ಸಂಸ್ಥೆ ‘ಪಬ್ಲಿಕ್ ಐ’ ಹಾಗೂ ‘ಇಂಟರ್‌ನ್ಯಾಷನಲ್ ಬೇಬಿ ಫುಡ್ ಆ್ಯಕ್ಷನ್ ನೆಟ್‌ವರ್ಕ್’ನ ಅಧ್ಯಯನ ವರದಿಯನ್ನು ಉಲ್ಲೇಖಿಸಿ ‘ದಿ ಗಾರ್ಡಿಯನ್’ ಪತ್ರಿಕೆ ವರದಿ ಮಾಡಿದೆ.

ವರದಿಯ ಮುಖ್ಯಾಂಶಗಳು ಬಹಿರಂಗವಾಗುತ್ತಲೇ ಮಕ್ಕಳ ಪೋಷಕರಿಂದ ವ್ಯಾಪಕ ಟೀಕೆಗಳು ವ್ಯಕ್ತವಾಗಿವೆ. ಇದರಿಂದಾಗಿ ಎಚ್ಚೆತ್ತ ‘ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ’ವು (ಎಫ್‌ಎಸ್‌ಎಸ್‌ಎಐ) ಸೆರೆಲಾಕ್ ಶಿಶು ಆಹಾರ ಉತ್ಪನ್ನಗಳನ್ನು ಕೂಲಂಕಷ ಪರಿಶೀಲನೆಗೆ ಒಳಪಡಿಸಲು ಮುಂದಾಗಿದೆ. ನಿಯಮ ಉಲ್ಲಂಘಿಸಿರುವುದು ಸಾಬೀತಾದರೆ ಕಂಪನಿಯ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು ಎಂದು ಕೇಂದ್ರ ಸರ್ಕಾರದ ಮೂಲಗಳು ತಿಳಿಸಿವೆ ಎಂದೂ ವರದಿಯಾಗಿದೆ.

ಈ ಕಂಪನಿಯು ಬೇರೆ ಬೇರೆ ದೇಶಗಳ ಮಾರುಕಟ್ಟೆಗಳಿಗೆ ಬೇರೆ ಬೇರೆ ಮಾನದಂಡಗಳನ್ನು ಬಳಸಿರುವುದು ನಿಜವೇ ಆಗಿದ್ದರೆ ಶಿಶು ಆಹಾರ ತಯಾರಿಕೆಯಲ್ಲೂ ತಾರತಮ್ಯ ಧೋರಣೆ ಅನುಸರಿಸಿದಂತೆ ಆಗುತ್ತದೆ. ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಒಂದು ಮಾನದಂಡ ಮತ್ತು ಅಭಿವೃದ್ಧಿ ಹೊಂದಿದ ದೇಶಗಳಿಗೆ ಒಂದು ಮಾನದಂಡ ಎಂಬುದು ಒಪ್ಪುವಂಥದ್ದಲ್ಲ. ಅದೂ ಶಿಶು ಆಹಾರ ಉತ್ಪನ್ನಗಳ ವಿಚಾರದಲ್ಲಿ ಇಂತಹ ತಾರತಮ್ಯವು ಅಕ್ಷಮ್ಯ. ಭಾರತ ಸೇರಿ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಮಾರಾಟ ಮಾಡುವ ಉತ್ಪನ್ನಗಳಲ್ಲಿ ಸಕ್ಕರೆ ಅಂಶ ಹೆಚ್ಚಿಗೆ ಇದೆಯಂತೆ. ಆಫ್ರಿಕಾ ಹಾಗೂ ಲ್ಯಾಟಿನ್ ಅಮೆರಿಕದ ದೇಶಗಳಿಗೂ ಇದೇ ಮಾನದಂಡ ಬಳಕೆಯಾಗಿದೆ. ಆದರೆ, ಯೂರೋಪ್ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಉತ್ಪನ್ನಗಳು ಸಕ್ಕರೆ ಅಂಶದಿಂದ ಮುಕ್ತವಾಗಿವೆ ಎಂದು ವರದಿ ತಿಳಿಸಿದೆ. ಸಕ್ಕರೆ ಅಂಶ ಹೆಚ್ಚಿಗಿರುವ ಆಹಾರವನ್ನು ಶಿಶುಗಳು ಸೇವಿಸಿದರೆ ಸ್ಥೂಲಕಾಯ ಸಮಸ್ಯೆ ಹಾಗೂ ದೀರ್ಘಕಾಲಿಕ ಆರೋಗ್ಯ ಸಮಸ್ಯೆಗಳಿಗೆ ತುತ್ತಾಗುವ ಸಂಭವವೂ ಇದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಗ್ರಾಹಕ ವಲಯದಿಂದ ಆಕ್ರೋಶದ ಅಲೆ ಹೊಮ್ಮಿದ ಕೂಡಲೇ ಕಂಪನಿ ಈ ಸಂಬಂಧ ಸ್ಪಷ್ಟನೆಯನ್ನು ನೀಡಿದೆ. ಭಾರತದಲ್ಲಿ ಮಾರಾಟ ಮಾಡುವ ತನ್ನ ಉತ್ಪನ್ನಗಳಿಗೆ ಸಕ್ಕರೆ ಅಂಶ ಬೆರೆಸುವ ಪ್ರಮಾಣವನ್ನು ಐದು ವರ್ಷಗಳಿಂದ ಈಚೆಗೆ ಶೇ. 30ರಷ್ಟು ಕಡಿತಗೊಳಿಸಲಾಗಿದೆ. ವಿಶ್ವ ಆರೋಗ್ಯ ಸಂಸ್ಥೆ ರೂಪಿಸಿರುವ ಮಾನದಂಡದ ಅನ್ವಯವೇ ಭಾರತದಲ್ಲಿ ಶಿಶು ಆಹಾರ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ ಎಂದು ನೆಸ್ಲೆ ಹೇಳಿದೆ.

ಅಧ್ಯಯನ ವರದಿ ಹೊರಗೆಳೆದಿರುವ ಅಂಶಗಳು ಮತ್ತು ಕಂಪನಿಯ ಸಮರ್ಥನೆ ಒತ್ತಟ್ಟಿಗಿರಲಿ. ಎಳೆ ಮಕ್ಕಳು ಅದರಲ್ಲೂ ಲಕ್ಷಾಂತರ ಮಕ್ಕಳಿಗೆ ನೀಡುವಂತಹ ಆಹಾರದ ಗುಣಮಟ್ಟವನ್ನು ಖಾತರಿಪಡಿಸುವ ಜವಾಬ್ದಾರಿ ಹೊತ್ತವರು ಈ ದಿಸೆಯಲ್ಲಿ ಇಷ್ಟು ದಿನ ಏನು ಮಾಡುತ್ತಿದ್ದರು? ಹುಳುಕು ಹೊರಬಿದ್ದ ಮೇಲೆ ಆಹಾರ ಸುರಕ್ಷತೆ ಪ್ರಾಧಿಕಾರವು ಎಚ್ಚೆತ್ತುಕೊಂಡು ಪರಿಶೀಲನೆ ಮಾಡುವ ಮಾತುಗಳನ್ನಾಡುತ್ತಿದೆ. ಅದರ ಪರಿಶೀಲನೆಗೆ ಇಲ್ಲಿಯವರೆಗೂ ಈ ಉತ್ಪನ್ನಗಳು ಒಳಪಟ್ಟೇ ಇರಲಿಲ್ಲವೆ? ಒಳಪಟ್ಟಿದ್ದಿದ್ದರೆ ಇದಕ್ಕೆ ಸಂಬಂಧಿಸಿದ ವರದಿ ಏನು ಹೇಳುತ್ತದೆ? ಯೂರೋಪ್ ರಾಷ್ಟ್ರಗಳ ಶಿಶುಗಳಿಗೆ ಬೇಡವಾದ ಸಕ್ಕರೆ ಅಂಶವನ್ನು ಅಭಿವೃದ್ಧಿಶೀಲ ರಾಷ್ಟ್ರಗಳ ಮಕ್ಕಳಿಗೆ ಉಣಬಡಿಸುವುದರ ಹಿಂದೆ ಇರುವ ಹುನ್ನಾರಗಳೇನು? ಇಂತಹ ಹಲವಾರು ಪ್ರಶ್ನೆಗಳಿಗೆ ಉತ್ತರ ಬೇಕಾಗಿದೆ.

**■ ಎನ್. ಉದಯಕುಮಾರ್**